ಓ.ಎಸ್. ನಂ. 180/2014

ಪಿ.ಡಬ್ಲ್ಯೂ: 01

ದಿನಾಂಕಃ 16.08.2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀಸವಾಲುಃ ಪ್ರತಿವಾದಿ ಪರ – ಶ್ರೀ BNR ವಕೀಲರಿಂದ.

ನಮ್ಮ ತಂದೆ ತಾಯಿಗೆ 4 ಜನ ಮಕ್ಕಳು. ರೇವಣಸಿದ್ದಪ್ಪ, ವೀರಪ್ಪ, ಶಿವನಗೌಡ ಮತ್ತು ಕೆಂಚನಗೌಡ. ಅಕ್ಕಮ್ಮ, ಚೆನ್ನಬಸಮ್ಮ ಮತ್ತು ರತ್ನಮ್ಮ ಎಂಬ 3 ಜನ ಹೆಣ್ಣು ಮಕ್ಕಳು ಸಹ ಇರುತ್ತಾರೆ. ಮತ್ತಿಹಳ್ಳಿ ಎಂಬುದು ನಮ್ಮ ಕುಟುಂಬದ ಹೆಸರು. ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ. ನನ್ನ ತಂದೆ 1972 ರಲ್ಲಿ ಮತ್ತು ನನ್ನ ತಾಯಿ 1985 ರಲ್ಲಿ ಮೃತಪಟ್ಟಿರುತ್ತಾರೆ. ನನ್ನ ತಂದೆ ಎಂ ಬಸಪ್ಪ, ತಾಯಿಯ ಹೆಸರು ಕೊಟ್ರಮ್ಮ ಇರುತ್ತದೆ. ನನ್ನ ತಾಯಿ ಪೊಣಬಗಟ್ಟಿ ಗ್ರಾಮದವರು. ದಾನಪತ್ರದಲ್ಲಿ ನಮೂದು ಮಾಡಿರುವ ಆಸ್ತಿಗಳನ್ನು ಹೊರತುಪಡಿಸಿ ಇತರೆ ಆಸ್ತಿಗಳು ನನ್ನ ತಂದೆಗೆ ಇರಲಿಲ್ಲ.

ಗುರುಸಿದ್ದಮ್ಮ ಅವರು ಅವಿದ್ಯಾವಂತೆ ಆಗಿದ್ದರು. ಅವರ ತವರು ಮನೆ ಮಂಗನಹಳ್ಳಿಯಾಗಿರುತ್ತದೆ. ಗುರುಸಿದ್ದಮ್ಮ ಅವರ ಅಣ್ಣನ ಹೆಸರು ಮತ್ತಿಹಳ್ಳಿ ಸಿದ್ದಲಿಂಗಪ್ಪ ಎಂದಾಗಿರುತ್ತದೆ. ಅವರುಗಳು ಒಂದೇ ತಂದೆ ತಾಯಿಯ ಮಕ್ಕಳು ಎಂದರೆ ಸರಿ. ಅವರ ತಂದೆಯ ಹೆಸರು ಭರಮಪ್ಪ ಮಂಗನಹಳ್ಳಿ ಎಂದು ಇರುತ್ತದೆ. ಆಕೆಯನ್ನು ಮತ್ತಿಹಳ್ಳಿ ಗುರುಸಿದ್ದಮ್ಮ ಎಂದು ಕರೆಯುತ್ತಿದ್ದರು ಎಂದರೆ ಸರಿ. ಗುರುಸಿದ್ದಮ್ಮಳ ತಾಯಿಯ ಹೆಸರು ನನಗೆ ಗೊತ್ತಿಲ್ಲ. ಆಕೆಯ ಹೆಸರು ಚಿಕಿರವ್ವ ಎಂದರೆ ನನಗೆ ಗೊತ್ತಿಲ್ಲ. ಗುರುಸಿದ್ದಮ್ಮ ಅವರ ತಂದೆ ತಾಯಿ ಮೃತಪಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಮತ್ತಿಹಳ್ಳಿ ಸಿದ್ದಲಿಂಗಪ್ಪ ಮದುವೆಯಾಗಿರಲಿಲ್ಲ ಹಾಗೂ ಮಕ್ಕಳು ಇರಲಿಲ್ಲ ಎಂದರೆ ಸರಿ. ಗುರುಸಿದ್ದಮ್ಮಳ ಗಂಡನ ಊರು ತವಡೂರು ಗ್ರಾಮ ಎಂದರೆ ಸರಿ. ಆಕೆಯನ್ನು ತವಡೂರು ಗುರುಸಿದ್ದಮ್ಮ ಹಾಗೂ ಕಸವನಗೌಡರ ಗುರುಸಿದ್ದಮ್ಮ ಎಂದು ಕರೆಯುತ್ತಿದ್ದರು ಎಂದರೆ ಸರಿ. ಆಕೆಗೆ ಗಂಡನ ಊರಿನಲ್ಲಿ ಆಸ್ತಿಗಳು ಇದ್ದವು ಎಂದರೆ ನನಗೆ ಗೊತ್ತಿಲ್ಲ.

ಗುರುಸಿದ್ದಮ್ಮಳಿಗೆ ಮಕ್ಕಳು ಇರಲಿಲ್ಲ ಎಂದರೆ ಸರಿ. ಗುರುಸಿದ್ದಮ್ಮಳ ಗಂಡನ ಅಣ್ಣನ ಮಗಳು ಕೊಟ್ರಮ್ಮ, ಪ್ರತಿವಾದಿ ಎಂದರೆ ಸರಿ. ಗುರುಸಿದ್ದಮ್ಮಳಿಗೆ ಮಕ್ಕಳಿಲ್ಲದ ಕಾರಣ ತವಡೂರಿನಲ್ಲಿದ್ದ ಆಕೆಯ ಆಸ್ತಿಯನ್ನು ತಮ್ಮ ಹೆಸರಿಗೆ ಮ್ಯುಟೇಶನ್ ಮಾಡಿಸಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

ಮತ್ತಿಹಳ್ಳಿ ಸಿದ್ದಲಿಂಗಪ್ಪರವರಿಗೆ ಆಸ್ತಿ ಇದ್ದ ಬಗ್ಗೆ ನನಗೆ ಗೊತ್ತಿಲ್ಲ. ಸರ್ವೆ ನಂಬರ್ 747 ಎ ಮತ್ತು 748 ಎ ನನ್ನ ಹೆಸರಿಗೆ ಮ್ಯುಟೇಶನ್ ಆಗಿದೆ ಎಂದರೆ ಸರಿ. ಸದರಿ ಸರ್ವೆ ನಂಬರುಗಳು ಮೂಲತಃ ನನ್ನ ಅಜ್ಜಿಯಾದ ಗುರುಸಿದ್ದಮ್ಮಳ ಆಸ್ತಿಯಾಗಿರುತ್ತದೆ. ಆಕೆ ನನ್ನ ತಾತನ ಅಣ್ಣನ ಮಗಳು ಆಗಿರುತ್ತಾಳೆ. ನನ್ನ ತಾತ ಶಿವನಗೌಡ ಹಾಗೂ ಭರಮಜ್ಜ ಅಣ್ಣ ತಮ್ಮಂದಿರು ಎಂದು ತೋರಿಸಲು ನ್ಯಾಯಾಲಯಕ್ಕೆ ಯಾವುದೇ ದಾಖಲಾತಿಗಳನ್ನು

ಹಾಜರುಪಡಿಸಿಲ್ಲ. ಸರ್ವೆ ನಂಬರ್ 747 ಎ ಮತ್ತು 748 ಎ ಮೂಲತಃ ಸರಕಾರದ ಆಸ್ತಿಯಾಗಿದ್ದು, ಸರಕಾರದವರು ಮತ್ತಿಹಳ್ಳಿ ಸಿದ್ದಲಿಂಗಪ್ಪರವರಿಗೆ ಪಟ್ಟಾ ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಅದನ್ನು ನನ್ನ ಹೆಸರಿಗೆ ಮಾಡಿಕೊಂಡ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬಲ್ಲೆ. ಅದನ್ನು ನನ್ನ ಹೆಸರಿಗೆ ಮಾಡಿಕೊಂಡ ದಾಖಲಾತಿಗಳು ಯಾವವು ಎಂದರೆ ಸದರಿ ದಾಖಲಾತಿಗಳು ನನ್ನ ಬಳಿ ಇವೆ ಅದರ ಆಧಾರದ ಮೇಲೆ ಮಾಡಿಸಿಕೊಂಡಿರುತ್ತೇನೆ.

ಸರ್ವೆ ನಂಬರ್ 747 ಎ ಮತ್ತು 748 ಎ ರ ಆಸ್ತಿಗಳನ್ನು ನಾನು ಸೃಷ್ಟಿಸಿದ ದಾಖಲಾತಿಗಳ ಆಧಾರದ ಮೇಲೆ ನನ್ನ ಹೆಸರಿಗೆ ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಆದ ಕಾರಣ ನನಗೆ ಸದರಿ ಸರ್ವೆ ನಂಬರುಗಳ ಮೇಲೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ.

ಗುರುಸಿದ್ದಮ್ಮ ಮಂಗನಹಳ್ಳಿಯಲ್ಲಿ ತನ್ನ ಗಂಡನೊಂದಿಗೆ ವಾಸಿಸುತ್ತಿದ್ದಳು ಎಂದರೆ ಸರಿ. ಗುರುಸಿದ್ದಮ್ಮಳ ಗಂಡ ಮೃತಪಟ್ಟ ನಂತರ ಪ್ರತಿವಾದಿ ಗುರುಸಿದ್ದಮ್ಮಳೊಂದಿಗೆ ವಾಸಿಸುತ್ತಿದ್ದರು ಎಂದರೆ ಸುಳ್ಳು. ಆಕೆಗೆ ವಯಸ್ಸಾದ ಕಾರಣ ಜೋಳದ ಕೂಡ್ಲಿಗಿ ಗ್ರಾಮಕ್ಕೆ ಸೇರಿದ ಗುರುಸಿದ್ದಮ್ಮಳ ಆಸ್ತಿಗಳನ್ನು ನೋಡಿಕೊಳ್ಳಲು ನನ್ನನ್ನು ನೇಮಿಸಿದ್ದರು ಎಂದರೆ ಸರಿ. ಅದನ್ನು ನಾನೇ ಉಳುಮೆ ಮಾಡುತ್ತಿದ್ದೆ. 1987 ನೇ ಇಸವಿಯಲ್ಲಿ ಆಕೆಗೆ 85-90 ವರ್ಷ ವಯಸ್ಸಾಗಿತ್ತು. 1979 ನೇ ಇಸವಿಯಲ್ಲಿ ನಿಪಿ 2 ನ್ನು ನೊಂದಾಯಿಸಲಾಗಿದೆ. ಅದನ್ನು 1976 ನೇ ಇಸವಿಯಲ್ಲಿ ಬರೆದಿದ್ದು, 1977 ನೇ ಇಸವಿಯಲ್ಲಿ ನೊಂದಾಯಿಸಲಾಗಿದೆ. ನಿಪಿ 2 ನ್ನು ಮಾಡಿಕೊಡಲು ನಾನೇ ಆಕೆಯನ್ನು ಉಪನೊಂದಣಾಧಿಕಾರಿಯವರ ಕಚೇರಿಗೆ ಕರೆದುಕೊಂಡು ಬಂದಿರುತ್ತೇನೆ. ಆದರೆ ಆಕೆಯೇ ಅದನ್ನು ಬರೆದು ಕೊಟ್ಟಿರುತ್ತಾಳೆ. ನಿಪಿ 2 ರಲ್ಲಿ ಇರುವ ಅಂಶವನ್ನು ನಾನು ಹೇಳಿ ಬರೆಸಿರುತ್ತೇನೆ ಎಂದರೆ ಆಕೆಯೇ ಹೇಳಿ ಬರೆಸಿರುತ್ತಾಳೆ. ಗುರುಸಿದ್ದಮ್ಮಳಿಗೆ ಓದಲು ಬರೆಯಲು ಬರುತ್ತಿರಲಿಲ್ಲ, ಆಕೆ ಹೆಬ್ಬೆಟ್ಟನ್ನು ಹಾಕುತ್ತಿದ್ದಳು. ನಿಪಿ 2 ರಲ್ಲಿ ದಾನಪತ್ರಕ್ಕೆ ಇರಬೇಕಾದ ಅಂಶಗಳು ಇಲ್ಲ ಎಂದರೆ ಇವೆ. ನಿಪಿ 2 ರಲ್ಲಿ ಕ್ರಯ ಪತ್ರದಲ್ಲಿ ಇರಬೇಕಾದ ನಿರ್ಧಿಷ್ಟವಾದ ಅಂಶಗಳು ಇವೆ ಎಂದರೆ ಇವೆ. ಅದರಲ್ಲಿ ಕ್ರಯ ಪತ್ರ ಎಂದು ನಮೂದು ಆಗಿರುವ ಜಾಗದಲ್ಲಿ ದಾನಪತ್ರ ಎಂದು ನಮೂದು ಮಾಡಿಸಿದ್ದೇನೆ ಎಂದರೆ ಆಕೆ ದಾನಪತ್ರವನ್ನು ಮಾಡಿಸಿಕೊಟ್ಟಿರುತ್ತಾಳೆ. ನಿಪಿ 2 ನ್ನು ಯಾವ ಕಾರಣಕ್ಕಾಗಿ ದಾನ ನೀಡುತ್ತಿರುವುದಾಗಿ ಬರೆದಿಲ್ಲ ಎಂದರೆ ಬರೆದಿದೆ. ಸಾಕ್ಷಿ ಮುಂದುವರೆದು ನಾನು ಆಕೆಯನ್ನು 20 ವರ್ಷಗಳಿಂದ ಸಾಕಿ ಸಲುಹಿರುತ್ತೇನೆ. ನಿಪಿ 2 ರ 7 ನೇ ಪುಟದ 12 ಸಾಲಿನಲ್ಲಿ ಕ್ರಯ ಎಂದೇ ನಮೂದಾಗಿದ್ದು ಅದನ್ನು ದಾನ ಎಂದು ನಮೂದು ಮಾಡಿಸಿರುವುದಿಲ್ಲ ಎಂದರೆ ಆಕೆಯೇ ದಾನ ಪತ್ರ ಬರೆದುಕೊಟ್ಟಿರುತ್ತಾಳೆ. ಕ್ರಯಕ್ಕೆ ಕೊಂಡ ಆಸ್ತಿಯನ್ನು ಗುರುಸಿದ್ದಮ್ಮಳ ವಾರಸುದಾರರು ಬರುವ ದಿನಗಳಲ್ಲಿ ತಂಟೆ ತಕರಾರು ನೀಡಬಾರದು ಎಂದು ಕ್ರಯ ಪತ್ರವನ್ನು ಕಾಟು ಹಾಕಿಸಿ ದಾನಪತ್ರ ಎಂದು ಬರೆಸಿದ್ದೇನೆ ಎಂದರೆ ಆಕೆಯೇ ಪತ್ರವನ್ನು ಬರೆಸಿರುತ್ತಾಳೆ.

ಓ.ಎಸ್. ನಂ. 180/2014

ಪಿ.ಡಬ್ಲ್ಯೂ: 01

ಗುರುಸಿದ್ದಮ್ಮ ಜೀವಂತ ಇದ್ದಾಗ ನಿಪಿ 2 ರ ಆಧಾರದ ಮೇರೆಗೆ ಯಾವುದೇ ಆಸ್ತಿ ವರ್ಗಾವಣೆ ಮಾಡಿಸಿರುವುದಿಲ್ಲ ಎಂದರೆ ಮಾಡಿಸಿಕೊಂಡಿರುತ್ತೇನೆ. ಗುರುಸಿದ್ದಮ್ಮ ಮೃತಪಟ್ಟ 21 ವರ್ಷಗಳ ನಂತರ ಆಸ್ತಿಯನ್ನು ನನ್ನ ಹೆಸರಿಗೆ ವರ್ಗಾವಣೆ ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿ. ನಾನು ಈ ರೀತಿ ದಾನಪತ್ರ ಎಂದು ನಮೂದು ಮಾಡಿಸಿದ ಪತ್ರದ ಆಧಾರದ ಮೇರೆಗೆ ನಾನು ಮಾಡಿದ ಮೋಸ ಹೊರಗೆ ಬರುತ್ತದೆ ಎಂದು ಆಕೆ ಜೀವಂತ ಇದ್ದ ಕಾಲದಲ್ಲಿ ಹಾಗೂ ಆಕೆ ಮೃತಪಟ್ಟ ಹಲವು ವರ್ಷಗಳ ನಂತರವು ಸಹ ನನ್ನ ಹೆಸರಿಗೆ ಖಾತೆ ಬದಲಾವಣೆ ಮಾಡಿಸಿಕೊಂಡಿರುವುದಿಲ್ಲ ಎಂದರೆ ನಾನು ಯಾವುದೇ ಮೋಸ ಮಾಡಿರುವುದಿಲ್ಲ. ಆದ ಕಾರಣ ನಿಪಿ 2 ಕಾನೂನಿನ ದೃಷ್ಟಿಯಲ್ಲಿ ಊರ್ಜಿತವಾದ ದಾಖಲಾತಿ ಅಲ್ಲ ಎಂದರೆ ಅದು ಊರ್ಜಿತವಾದ ದಾಖಲಾತಿಯಾಗಿರುತ್ತದೆ.

ನಿಪಿ 2 ರಲ್ಲಿ ಬರೆದಿರುವ ಅಂಶಗಳು ಗುರುಸಿದ್ದಮ್ಮ ಎಂದು ಗೊತ್ತಿರುವುದಿಲ್ಲ ಮತ್ತು ಆಕೆ ಅದನ್ನು ಸ್ವ ಇಚ್ಚೆಯಿಂದ ಬರೆದುಕೊಟ್ಟಿರಲಿಲ್ಲ ಎಂದರೆ ಸರಿಯಲ್ಲ. ಆದ ಕಾರಣ ನಿಪಿ 2 ರಲ್ಲಿ ನಮೂದಾಗಿರುವ ಆಸ್ತಿಗಳಿಗೆ ನನಗೆ ಹಕ್ಕು ಬಂದಿರುವುದಿಲ್ಲ ಹಾಗೂ ನನಗೆ ಯಾವುದೇ ಹಿತಾಸಕ್ತಿ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ಪ್ರತಿವಾದಿ ಕೊಟ್ರಮ್ಮಳೇ ಹಕ್ಕುದಾರಳು ಎಂದರೆ ಆಕೆಗೆ ಸಂಬಂಧ ಇರುವುದಿಲ್ಲ. ಗುರುಸಿದ್ದಮ್ಮ ಮೃತಪಟ್ಟ ನಂತರ ದಾವಾ ಆಸ್ತಿಗೆ ಪ್ರತಿವಾದಿಯೇ ಹಕ್ಕುದಾರರು ಹಾಗೂ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ.

ಅಸಲು ದಾವೆ ಸಂಖ್ಯೆ 115/23 ರಲ್ಲಿ ಪ್ರತಿವಾದಿ ನನ್ನ ವಿರುದ್ಧ ಒಂದು ದಾವೆ ಹೂಡಿದ್ದು ಅದರ ಸಮನ್ಸ ನನಗೆ ತಲುಪಿರುತ್ತದೆ ಎಂದರೆ ಸರಿ. ಸರ್ವೆ ನಂಬರ್ 747/ಎ , 748/ಎ ಮತ್ತು ನಿಪಿ 2 ರಲ್ಲಿರುವ ಆಸ್ತಿಗಳನ್ನು ಸದರಿ ದಾವೆಯಲ್ಲಿ ಸೇರಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಎಲ್ಲ ಆಸ್ತಿಗಳನ್ನು ಹೊಡೆಯುವ ಕಾರಣ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಮುಕ್ತಾಯ.

ಮರು-ವಿಚಾರಣೆ ಇಲ್ಲ.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,ಕೂಡ್ಲಿಗಿ.